ದಿನಾಂಕಃ 02-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- 1 ರಿಂದ 4, 6 ರಿಂದ 8 ನೇ ಪ್ರತಿವಾದಿಯರ ಪರವಾಗಿ ಶ್ರೀ.ಜಿ.ಬಿ.ಎಚ್. ವಕೀಲರಿಂದಃ-**

ಈ ದಾವೆಯನ್ನು ಮೂರು ಆಸ್ತಿಗಳ ಮೇಲೆ ಹಾಕಿದ್ದಾರೆ. ಮೊದಲನೇ ಆಸ್ತಿಯ ಸರ್ವೆ ನಂಬರ್ 60/2 ಆಗಿದ್ದು ಅದರಲ್ಲಿ 1 ಎಕರೆ 13 ಗುಂಟೆಯ ಚೆಕ್ಕುಬಂಧಿ ಗೊತ್ತು. ಪೂರ್ವಕ್ಕೆ ವೀರಣ್ಣನಹಳ್ಳಿ ಗ್ರಾಮ ಠಾಣಾ, ಪಶ್ಚಿಮಕ್ಕೆ ಅಪ್ಪಣ್ಣಪ್ಪನ ಜಮೀನು, ಉತ್ತರಕ್ಕೆ ಓಣಿ ಮತ್ತು ಹಳ್ಳ, ದಕ್ಷಿಣಕ್ಕೆ ಶಂಕರ್ ನಾಯ್ಕನ ಜಮೀನು. ಸದರಿ ಜಮೀನನ್ನು ಸುಮಾರು 40 ವರ್ಷದಿಂದ ನೋಡುತ್ತಿದ್ದೇನೆ. ವೀರಣ್ಣನಹಳ್ಳಿ ಗ್ರಾಮ ರೆವಿನ್ಯೂ ಗ್ರಾಮವಾಗಿದ್ದು ಮೊದಲಿನಿಂದಲೂ ಇದೆ ಎಂದರೆ ಸರಿ. ಸದರಿ ಗ್ರಾಮದಲ್ಲಿ ಸುಮಾರು 40 ಮನೆಗಳಿವೆ. ಅಪ್ಪಣ್ಣಪ್ಪನ ಜಮೀನನ್ನು ಸುಮಾರು 40 ವರ್ಷದಿಂದ ನೋಡುತ್ತಿದ್ದೇನೆ. ಅವರು ಬ್ರಾಹ್ಮಣರ ಕಡೆಯಿಂದ ಖರೀದಿ ಮಾಡಿದ್ದಾರೆ. ಉತ್ತರಕ್ಕೆ ಓಣಿ ಮತ್ತು ಹಳ್ಳ ಜಂಟಿಯಾಗಿದೆ. ಅದರಲ್ಲಿ ಓಣಿಯಾಗೂ ಉಪಯೋಗಿಸುತ್ತಾರೆ ಹಾಗೂ ಹಳ್ಳವಾಗಿ ಹರಿಯುತ್ತದೆ. ಹಿಂದಿನ ಕಾಲದಲ್ಲಿ ಜನ ಮತ್ತು ಜಾನುವಾರು ಓಡಾಡುವ ಜಾಗಕ್ಕೆ ಓಣಿ ಎಂದು ಕರೆಯುತ್ತಾರೆ ಎಂದರೆ ಸರಿ. ಈ ಓಣಿ ಮೊದಲಿನಿಂದಲೂ ಗ್ರಾಮದಿಂದ ಕಾಡಿಗೆ ಹೋಗಲು ಇದೆ ಎಂದರೆ ಸರಿ. ಸದರಿ ಓಣಿಯು ಗ್ರಾಮ ಠಾಣಾದಿಂದ ಪೂರ್ವ ಮುಖವಾಗಿ ಹುಟ್ಟಿ ಪಶ್ಚಿಮ ದಿಕ್ಕಿಗೆ

ಜಾನ್ಕಲ್ ಅರಣ್ಯಕ್ಕೆ ಹೋಗುತ್ತದೆ. ಗ್ರಾಮ ಠಾಣಾದಿಂದ ಜಮೀನುಗಳು ದಕ್ಷಿಣದಿಂದ ಉತ್ತರಕ್ಕೆ ಹಾಗೂ ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಿನಲ್ಲಿವೆ ಎಂದರೆ ಸರಿ. ಸರ್ವೆ ನಂಬರ್ 60/2ರ ಉತ್ತರ ದಿಕ್ಕಿನಲ್ಲಿರುವ ಹಳ್ಳವು ಸರ್ವೆ ನಂಬರ್ 60ರಲ್ಲಿ ಪ್ರಾರಂಭವಾಗಿ ಅಲ್ಲೇ ಮುಕ್ತಾಯವಾಗುತ್ತದೆ. ಸದರಿ ಹಳ್ಳವು ಪೂರ್ವದಿಂದ ಪಶ್ಚಿಮಕ್ಕೆ ಹರಿಯುತ್ತದೆ. ಈ ಜಮೀನಿನ ಉತ್ತರಕ್ಕೆ ಓಣಿ ಬಿಟ್ಟರೆ ಯಾವುದೇ ಹಳ್ಳವಿಲ್ಲ ಎಂದರೆ ಸಾಕ್ಷಿಯು ಮೊದಲು ಇತ್ತು ಈಗ ಒತ್ತುವರಿಯಾಗಿದ್ದು ಯಾವುದೇ ಹಳ್ಳವಿಲ್ಲ ಎಂದು ಹೇಳುತ್ತಾರೆ.

ದಾವಾ ಆಸ್ತಿಯ ಇನ್ನೊಂದು ಸರ್ವೆ ನಂಬರ್ 50/1 ದಾಗಿದ್ದು ಅದರಲ್ಲಿ 25 ಗುಂಟೆ ವಿಸ್ತೀರ್ಣವಿದೆ. ಅದರ ಚೆಕ್ಕುಬಂಧಿ ಗೊತ್ತು. ಪೂರ್ವಕ್ಕೆ ಹಳ್ಳ, ಪಶ್ಚಿಮಕ್ಕೆ ಗಂಗಮ್ಮನ ಜಮೀನು, ಉತ್ತರಕ್ಕೆ ಅಶ್ವಥಮ್ಮನ ಜಮೀನು, ದಕ್ಷಿಣಕ್ಕೆ ಗುಟ್ಟೆ ಸದರಿ ಜಮೀನನ್ನು ನಾನು 40 ವರ್ಷದಿಂದ ನೋಡುತ್ತಿದ್ದೇನೆ. ಸದರಿ ಜಮೀನಿನ ಪೂರ್ವದಲ್ಲಿರುವ ಹಳ್ಳವು ದಕ್ಷಿದಿಂದ ಉತ್ತರಾಭಿಮುಖವಾಗಿ ಹರಿದು ಆ ಜಮೀನು ಮುಗಿದ ನಂತರ ಪೂರ್ವ ದಿಕ್ಕಿಗೆ ಹರಿಯುತ್ತದೆ ಎಂದರೆ ಸರಿ. ಈ ಹಳ್ಳವು 15 ಅಡಿ ಅಗಲ ಹಾಗೂ 8 ಅಡಿ ಆಳವಿದೆ ಎಂದರೆ ಸರಿಯಲ್ಲ. ಆದರೆ 10 ಅಡಿ ಅಗಲ, 5 ಅಡಿ ಆಳವಿರುತ್ತದೆ. ವೀರಣ್ಣನಹಳ್ಳಿ ಗ್ರಾಮದಲ್ಲಿ ಇದು ಒಂದೇ ಹಳ್ಳ ಎಂದರೆ ಸಾಕ್ಷಿಯು ಇದು ಒಂದೇ ದೊಡ್ಡ ಹಳ್ಳವಾಗಿರುತ್ತದೆ ಇನ್ನೆರಡು ಚಿಕ್ಕ ಹಳ್ಳಗಳಿವೆ ಎಂದು ಹೇಳುತ್ತಾರೆ. ಸದರಿ ಚಿಕ್ಕ ಹಳ್ಳಗಳು ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹರಿಯುತ್ತದೆ

ಎಂದು ಹೇಳಬಹುದು ಆದರೆ ಯಾವ ಸರ್ವೆ ನಂಬರಿನಲ್ಲಿ ಹರಿದು ಹಾದು ಹೋಗುತ್ತವೆ ಎಂದು ಹೇಳಲು ಆಗುವುದಿಲ್ಲ. ವೀರಣ್ಣನಹಳ್ಳಿ ಕಟ್ಟೆಯಿಂದ ಪ್ರಾರಂಭವಾಗಿ ದೊಡ್ಡ ಹಳ್ಳಕ್ಕೆ ಸೇರಿ ಪುಟ್ಟೇನಹಳ್ಳಿ ಕೆರೆಗೆ ಹೋಗುತ್ತದೆ.

ಇನ್ನೊಂದು ದಾವಾ ಆಸ್ತಿ ಸರ್ವೆ ನಂಬರ್ 3/2ಎ ರಲ್ಲಿ 39 ಗುಂಟೆ ಇರುತ್ತದೆ. ಅದರ ಚೆಕ್ಕುಬಂಧಿ ಗೊತ್ತು. ಪೂರ್ವಕ್ಕೆ ಅಪ್ಪಣ್ಣಪ್ಪನ ಮಕ್ಕಳ ಜಮೀನು, ಪಶ್ಚಿಮಕ್ಕೆ ಲಕ್ಷ್ಮನಾಯ್ಕನ ಜಮೀನು, ಉತ್ತರಕ್ಕೆ ಹಳ್ಳ, ದಕ್ಷಿಣಕ್ಕೆ ಈರಪ್ಪ ಮತ್ತು ಭದ್ರಿನಾಯ್ಕನ ಜಮೀನು. ಉತ್ತರಕ್ಕೆ ಹಳ್ಳದಿಂದ ಆಚೆಗೆ ಈರಪ್ಪನ ಜಮೀನು ಇದೆ ಎಂದರೆ ಸರಿ. ಭದ್ರಿನಾಯ್ಕನು ಸದರಿ ಜಮೀನನ್ನು ರಾಮನಾಯ್ಕನಿಂದ ಖರೀದಿಸಿದ್ದಾರೆ ಎಂದರೆ ಗೊತ್ತಿಲ್ಲ. ಸರ್ವೆ ನಂಬರ್ 3/2ಎ ರ ಜಮೀನನ್ನು ನಾರಾಯಣನಾಯ್ಕನ ಕಡೆಯಿಂದ ವಾದಿಯ ಮಗ ರಾಮಮೂರ್ತಿ ಸುಮಾರು 7-8 ವರ್ಷದ ಹಿಂದೆ ಖರೀದಿಸಿದ್ದಾರೆ. ಸದರಿ ಜಮೀನಿನಲ್ಲಿ ಸುಮಾರು 35-40 ವರ್ಷದ ಸುಮಾರು 40 ತೆಂಗಿನ ಮರಗಳಿವೆ. ಅದರಲ್ಲಿ ಬೋರ್ವೆಲ್ ಇದೆ ಎಂದರೆ ಸರಿ. ಈ ಜಮೀನಿನ ಉತ್ತರಕ್ಕಿರುವ ವಾದಿಯ ಗಂಡ ಈರಪ್ಪನ ಜಮೀನಿನಲ್ಲಿ ತೆಂಗಿನ ಮರಗಳಿವೆ ಎಂದರೆ ಸರಿ. ಆ ಮರಗಳು ಕೂಡ ಅದೇ ವಯಸ್ಸಿನವು ಎಂದರೆ ನಿಖರವಾಗಿ ಹೇಳಲು ಆಗುವುದಿಲ್ಲ. ಸದರಿ ಸರ್ವೆ ನಂಬರ್ 3/2ಎ ರಲ್ಲಿರುವ ಮರಗಳು ಹಾಗೂ ಅದರ ಉತ್ತರಕ್ಕಿರುವ ಜಮೀನಿನಲ್ಲಿರುವ ಮರಗಳನ್ನು ಈರಪ್ಪ ಹಾಗೂ ಅವರ ಮಕ್ಕಳೇ ಹಾಕಿ ಬೆಳೆಸಿದ್ದಾರೆ ಎಂದರೆ ಸಾಕ್ಷಿಯು ಈರಪ್ಪನ ಆಸ್ತಿಯಲ್ಲಿ

ಅವರು ಹಾಕಿದ್ದಾರೆ ನಾರಾಯಣನಾಯ್ಕುನ ಆಸ್ತಿಯಲ್ಲಿ ನಾರಾಯಣನಾಯ್ಕುನೇ ಹಾಕಿದ್ದಾರೆ ಎಂದು ಹೇಳುತ್ತಾರೆ.

ನಾರಾಯಣನಾಯ್ಕು, ರಾಗ್ಯನಾಯ್ಕು, ರಾಜ್ಯನಾಯ್ಕು, ಶಿವನಾಯ್ಕುರವರು ವೀರಣ್ಣನಹಳ್ಳಿ ತಾಂಡದಲ್ಲೇ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಸರ್ವೆ ನಂಬರ್ 3/2ಎ ರ ಆಸ್ತಿಯನ್ನು ಸದರಿಯವರು ರಾಮ್ ರಾವ್ ಕಡೆಯಿಂದ ಖರೀದಿಸಿದ್ದಾರೆ. ಸರ್ವೆ ನಂಬರ್ 60/2ರ ಆಸ್ತಿಯನ್ನು ದೊಡ್ಡಲಕ್ಷ್ಮನಾಯ್ಕುನ ಮಕ್ಕಳಾದ ಗೋಪಿನಾಯ್ಕು ಮತ್ತು ನಾಗನಾಯ್ಕುರವರ ಕಡೆಯಿಂದ ವಾದಿಯ ಗಂಡ ಈರಪ್ಪ ಖರಿದಿ ಮಾಡಿದ್ದಾರೆ. ಸದರಿ ಜಮೀನು ಈರಪ್ಪ ಖರೀದಿಸುವ ಮೊದಲು ಯಾರ ಸ್ವಾಧೀನದಲ್ಲಿತ್ತು ಎಂದರೆ ಗೊತ್ತಿಲ್ಲ. ಪೂರ್ವಕ್ಕೆ ಅಪ್ಪಣ್ಣಪ್ಪನ ಜಮೀನು, ಪಶ್ಚಿಮಕ್ಕೆ ನಾಗನಾಯ್ಕುನ ಜಮೀನು, ಉತ್ತರಕ್ಕೆ ಹಳ್ಳ ಮತ್ತು ವಶ್ಯನಾಯ್ಕುನ ಜಮೀನು, ದಕ್ಷಿಣಕ್ಕೆ ರಾಮನಾಯ್ಕುನ ಜಮೀನು ಈ ಚೆಕ್ಕುಬಂಧಿಯೊಳಗಿರುವ ಜಮೀನನ್ನು ಸುಮಾರು 40 ವರ್ಷದಿಂದ ನೋಡುತ್ತಿದ್ದೇನೆ. ಸಾಕ್ಷಿಯು ಮುಂದುವರೆದು ನಾನು ಮೇಲೆ ಹೇಳಿದ ಮೂರು ಆಸ್ತಿಯನ್ನು ಬಿಟ್ಟು ಬೇರೆ ಯಾವುದೇ ಜಮೀನನ್ನು ನೋಡಿಲ್ಲ ಎಂದು ಹೇಳುತ್ತಾರೆ.

ಸಾಕ್ಷಿಗೆ ನಿಪಿ.2ರಲ್ಲಿರುವ ಚೆಕ್ಕುಬಂಧಿಯನ್ನು ಈ ರೀತಿ ಓದಿ ಸರ್ವೆ ನಂಬರ್ 56 ಖುಷ್ಕಿ 26 ಗುಂಟೆ ಪೈಕಿ ಪೂರ್ವಕ್ಕೆ ನಾಗನಾಯ್ಕುನ ಜಮೀನು, ಪಶ್ಚಿಮಕ್ಕೆ ನರಸಿಂಹನಾಯ್ಕುನ ಜಮೀನು, ಉತ್ತರಕ್ಕೆ ಸರ್ಕಾರಿ ಓಣಿ, ದಕ್ಷಿಣಕ್ಕೆ ಕೀಮ್ಯನಾಯ್ಕುನ

ಜಮೀನು ಈ ಚೆಕ್ಕುಬಂಧಿಯೊಳಗಿರುವ ಜಮೀನನ್ನು ನೋಡಿದ್ದೀರಾ ಎಂದರೆ ಇಲ್ಲ. ಸಾಕ್ಷಿಗೆ ಇನ್ನೊಂದು ಕ್ರಯ ಪತ್ರದಲ್ಲಿರುವ ಚೆಕ್ಕುಬಂಧಿಯನ್ನು ಈ ರೀತಿ ಓದಿ ಸರ್ವೆ ನಂಬರ್ 60 ಖುಷ್ಕಿ 1 ಎಕರೆ 13 ಗುಂಟೆ ಪೈಕಿ ಪೂರ್ವಕ್ಕೆ ಅಪ್ಪಣ್ಣಪ್ಪನ ಜಮೀನು, ಪಶ್ಚಿಮಕ್ಕೆ ನಾಗನಾಯ್ಕನ ಜಮೀನು, ಉತ್ತರಕ್ಕೆ ಸರ್ಕಾರಿ ಹಳ್ಳ ಮತ್ತು ವಶ್ಯನಾಯ್ಕನ ಜಮೀನು, ದಕ್ಷಿಣಕ್ಕೆ ರಾಮನಾಯ್ಕನ ಜಮೀನು ಈ ಚೆಕ್ಕುಬಂಧಿಯೊಳಗಿರುವ ಜಮೀನನ್ನು ನೋಡಿದ್ದೀರಾ ಎಂದರೆ ಇಲ್ಲ. ನಾನು ಸರ್ವೆ ನಂಬರ್ 60/2 ರ ಉತ್ತರಕ್ಕೆ ಹಳ್ಳ ಇದೆ ತಿಳಿಸಿದ್ದು ಈ ರೀತಿ ಯಾವುದೇ ಹಳ್ಳ ಇಲ್ಲ ಎಂದರೆ ಸರಿಯಲ್ಲ. ರಾಗ್ಯನಾಯ್ಕ ಮತ್ತು ಸಹೋದರರು ವಾದಿಯ ಮಗನಿಗೆ ಮಾರಾಟ ಮಾಡಿದ್ದಾರೆ ಎಂದು ಹೇಳಿರುವ ಜಮೀನಿನಲ್ಲಿ ಅವರು ಯಾವತ್ತಿಗೂ ಸ್ವಾಧೀನದಲ್ಲಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿ ಹಾಗೂ ಅವರ ಮಕ್ಕಳು ಯಾವತ್ತಿಗೂ ಸ್ವಾಧಿನದಲ್ಲಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಪ್ರತಿವಾದಿಯರೇ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಪ್ರತಿವಾದಿಗಳು ಗೊತ್ತು. ಅವರು ಗೋಪಿನಾಯ್ಕನ ಮೊಮ್ಮಕ್ಕಳು. ನನ್ನ ಊರು ಮಾಡಗಾನಹಟ್ಟಿ. ನನಗೆ ವೀರಣ್ಣನಹಳ್ಳಿ ಗ್ರಾಮದಲ್ಲಿ ಯಾವುದೇ ಆಸ್ತಿ ಇಲ್ಲ. ಅಲ್ಲೇ ಪಕ್ಕದಲ್ಲಿರುವ ಪುಟ್ಟೇನಹಳ್ಳಿಯಲ್ಲಿ ಆಸ್ತಿ ಇದೆ. ಪುಟ್ಟೇನಹಳ್ಳಿ ಗ್ರಾಮದಲ್ಲಿ ಸರ್ವೆ ನಂಬರ್ 7/9 ಮತ್ತು 13/3 ರಲ್ಲಿ ಆಸ್ತಿ ಇವೆ. ದಾವಾ ಆಸ್ತಿಯಿಂದ ಸದರಿ ಆಸ್ತಿಯು 40 ಕಿ.ಮೀ. ದೂರವಿದೆ ಎಂದರೆ ಸರಿಯಲ್ಲ. ನನಗೆ ವಾದಿಯ ಮಗನೊಂದಿಗೆ

ಅವರ ತಂದೆ ಈರಪ್ಪನ ಕಾಲದಿಂದಲೂ ವಿಶ್ವಾಸ ಇದೆ. ಪ್ರತಿವಾದಿಗಳ ಜೊತೆಗೂ ವಿಶ್ವಾಸವಿದೆ. ನಾನು ವಾದಿಯರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ